ಇಸ್ರೊ ಸಮಾಜಮುಖಿ ಸಂಶೋಧನೆಗಳ ಮೂಲಕ ಜನಸಾಮಾನ್ಯರಿಗೆ ನೆರವು ನೀಡುತ್ತಿದೆ: ಕಿರಣ್‌ಕುಮಾರ್

ಯುವ ಜನತೆಯ ಉತ್ಪನ್ನಗಳ ತಯ

# ವೈದ್ಯ ಕ್ಷೇತ್ರದಲ್ಲಿ ಕುಸಿಯುತ್ತಿರುವ ಮೌಲ್ಯ

## ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ವಿಷಾದ

**ವಿಕ ಸುದ್ದಿಲೋಕ** ಬೆಂಗಳೂರು

ವ್ಯಾಪಾರೀಕರಣಗೊಂಡಿರುವ ವೈದ್ಯಕೀಯ ಕ್ಷೇತ್ರದಲ್ಲಿ ಮೌಲ್ಯಗಳು ಕುಸಿಯುತ್ತಿವೆ ಎಂದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ವಿಷಾದ ವ್ಯಕ್ತಪಡಿಸಿದರು.

ಸಾಹಿತ್ಯ ಸಂಘ ಹಾಗೂ ಗಣೇಶ ಮಂದಿರ ನಾಗರಿಕ ವೇದಿಕೆ ಉದಯಭಾನು ಕಲಾಸಂಘದಲ್ಲಿ ಬುಧವಾರ ಆಯೋಜಿಸಿದ್ದ ಸಾಮಾಜಿಕ ಚಿಂತಕ ದಿ.ವಿ.ಎಸ್. ಕೃಷ್ಣಯ್ಯರ್ ಅವರ 94ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ 'ವಿ.ಎಸ್.ಕೃಷ್ಣಯ್ಯರ್ ಪ್ರಶಸ್ತಿ' ಸ್ವೀಕರಿಸಿ ಅವರು ಮಾತನಾಡಿದರು.

''ತುರ್ತು ಚಿಕಿತ್ಸೆ ಎಂದು ಬರುವವರಿಗೆ ಮೊದಲು ಚಿಕಿತ್ಸೆ, ನಂತರ ಹಣ ಪಾವತಿ ಎನ್ನುವುದು ವೈದ್ಯಕೀಯ ಸೇವೆಯ ಉದ್ದೇಶ. ಆದರೆ, ಇವತ್ತಿನ ದಿನಗಳಲ್ಲಿ ಮೊದಲು ಹಣ ನಂತರ ಚಿಕಿತ್ಸೆ ಎನ್ನುವ ವಾತಾವರಣ ಸೃಷ್ಟಿಯಾಗಿದೆ. ಇತ್ತೀಚಿನ ವರ್ಷಗಳಲ್ಲಿ ಹೃದಯ ಸಂಬಂಧಿ ಕಾಯಿಲೆಗಳಿಂದ ಶೇ. 8ರಷ್ಟು ಸಾವು, ಹೃದಯಾಘಾತದಿಂದ ಶೇ.25ರಷ್ಟು ಹಾಗೂ ಅಪಘಾತಗಳಿಂದ ಶೇ.11ರಷ್ಟು ಸಾವುಗಳು ಸಂಭವಿಸುತ್ತಿವೆ. ದೇಹಕ್ಕೆ ವ್ಯಾಯಾಮವಿಲ್ಲದಿರುವುದು, ಜಂಕ್ ಫುಡ್ ಸೇವನೆ, ಒತ್ತಡ ಜೀವನ ಶೈಲಿ ಮನುಷ್ಯನನ್ನು ಅನಾರೋಗ್ಯಕ್ಕೆ ನೂಕುತ್ತಿವೆ. ಪ್ರಕೃತಿ ನಿಯಮಕ್ಕೆ ವಿರುದ್ಧವಾಗಿ ನಡೆಸುತ್ತಿರುವ ಮನುಷ್ಯನ ಚಟುವಟಿಕೆಗಳು ಅನಾರೋಗ್ಯ ಹಾಗೂ ಸಾವನ್ನು ಹತ್ತಿರಕ್ಕೆ ತರುತ್ತಿವೆ. ಈ ಹಿಂದೆ ಅನಾರೋಗ್ಯವೆಂದು ಪಾಲಕರನ್ನು ಮಕ್ಕಳು ಆಸ್ಪತ್ರೆಗೆ ಕರೆತರುತ್ತಿದ್ದರು. ಆದರೆ ಈಗ ಮಕ್ಕಳನ್ನೇ ಪಾಲಕರು ಆಸ್ಪತ್ರೆಗೆ ಕರೆತರುತ್ತಿದ್ದಾರೆ'' ಎಂದು ಮಂಜುನಾಥ್ ವಿಷಾದಿಸಿದರು.

''ಸರಳ ಮತ್ತು ಉನ್ನತ ಆಲೋಚನೆಗಳನ್ನು ಹೊಂದಿದ್ದ ಸಮಾಜ ಸೇವಕ ಆದರ್ಶ ವ್ಯಕ್ತಿಯಾಗಿದ್ದ ಕೃಷ್ಣಯ್ಯರ್ ಅವರು ಅನಾರೋಗ್ಯವೆಂದು ಆಸ್ಪತ್ರೆಗೆ ಬಂದಾಗ ಸರತಿ ಸಾಲಿನಲ್ಲಿ ನಿಲ್ಲುತ್ತಿದ್ದರು. ಆದರೆ, ಇಂದು ಸರಕಾರಿ ಆಸ್ಪತ್ರೆಯೆಂದರೆ ಏನು ಬೇಕಾದರೂ ಮಾಡಬಹುದು ಎನ್ನುವ ಮನೋಭಾವ ಮೂಡಿದ್ದು, ರಾಜಕಾರಣಿಗಳ ಪ್ರಭಾವ ಬಳಸಿ ತಮಗೆ ಮೊದಲು ಚಿಕಿತ್ಸೆ ಎಂದು ಜನ ಬರುತ್ತಿದ್ದಾರೆ. ಅನಾರೋಗ್ಯಕ್ಕೆ ತುತ್ತಾಗಿರುವ ಬೇರೆ ವ್ಯಕ್ತಿಗಳ ಬಗ್ಗೆ ಕಾಳಜಿ ಇಲ್ಲ'' ಎಂದರು.




ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್ ಅವರಿಗೆ ದಿವಂಗತ ವಿ.ಎಸ್.ಕೃಷ್ಣಯ್ಯರ್ ಅವರ 94ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ 'ವಿ.ಎಸ್.ಕೃಷ್ಣಯ್ಯರ್ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಶಾಸಕರಾದ ಬಿ.ಆರ್ ಪಾಟೀಲ್, ಎಲ್.ಎ.ರವಿಸುಬ್ರಮಣ್ಯ, ಕನ್ನಡಪರ ಹೋರಾಟಗಾರ ವಾಟಾಳ್ ನಾಗರಾಜ್, ಸಾಹಿತ್ಯ ಸಂಘ ಹಾಗೂ ಗಣೇಶ ಮಂದಿರ ನಾಗರಿಕ ವೇದಿಕೆ ಅಧ್ಯಕ್ಷರಾದ ಸುಮಿತ್ರ ಕೃಷ್ಣಯ್ಯರ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಬಿಬಿಎಂಪಿ ಮಾಜಿ ಸದಸ್ಯ ಕೃಪಾನಂದ ಅವರ 'ಸತ್ಯವಂತ ಕೃಪಾನಂದ' ಕೃತಿ ಬಿಡುಗಡೆ ಮಾಡಲಾಯಿತು.